ಧೋತರುಡುತ್ತಿದ್ದರು. ಫಳಫಳ ಮಿಂಚುವ ಚಿನ್ನದುಂಗುರ ಸದುಕಾಕಾನ ಬೆರಳಲ್ಲಿತ್ತು. ಆ ಬೆರಳನ್ನು ಸದುಕಾಕಾ ಸದಾ ಕುಣಿಸುತ್ತಿದ್ದ. ಬಾಬುಅಣ್ಣ ಬೆಳ್ಳಗಿದ್ದರೆ, ಸದುಕಾಕಾ ಕಪ್ಪಗಿನವವ. ಕಪ್ಪುಬಿಳುಪಿನ ಇವರಿರ್ವರನ್ನು ಊರು ಜನ ತಾತ್ಯಾ–ಕಾಕಾ ಎಂದು ಸಂಬೋಧಿಸುತ್ತಿದ್ದರು. ಇಬ್ಬರದೂ ವ್ಯಕ್ತಿತ್ವ ಎಂಥದ್ದು ಅಂದರೆ, ಯಾವುದೇ ತಂಟೆ–ಕಲಹಗಳನ್ನು ಪೋಲಿಸ್ ಕಟ್ಟೆ ಹತ್ತದಂತೆ ಸ್ಥಳೀಯವಾಗಿ ನಿಭಾಯಿಸಬಲ್ಲಂಥದ್ದು. ಸಾಮಾನ್ಯವಾಗಿ ಆಯಾ ಸಮುದಾಯದ ಹಿರಿಯರು ಪಾಲು ಮಾಡುತಾರೆ. ವಿಶೇಷವೆಂದರೆ ಇವರಿಬ್ಬರು ಮಹಾದೇವನ ಜಾತಿಕೋಮಿನವರಲ್ಲ. ಮಹಾದೇವನ ತಂದೆಗೆ ತನ್ನ ಬಂಧುಗಳಿಂದ ದೂರ ಅಂತರ ಕಾಯ್ದುಕೊಳ್ಳುವುದಿತ್ತು. ಸದುಕಾಕಾನ ವಖಾರಿಯೊಳಗೆ ಎಲ್ಲರೂ ಕುಳಿತಿದ್ದರು. ನೀರವ ಮೌನ. ಬಾಬು ಅಣ್ಣ ಮೌನಮುರಿದರು.

“ಮತ್ತ ಯಾನ್ಯಾನ, ಹೆಂಗ ಮಾಡಬೇಕಂತಿ ರುದ್ರಪ್ಪ?” ವಿಷಯ ಪ್ರಸ್ತಾಪಿಸಿದರು.

“ನಿಮಗೆಲ್ಲ ಗೊತ್ತ ಐತಿ. ಬಿಚ್ಚಿ ಹೇಳೋದ್ಯಾನ ಮತ್ತ. ಮಕ್ಕಳು ನಾಳಿ ಬಡಿದ್ಯಾಡಿ ಮಾನ ಕಳಿಬಾರದು, ಪಾಲಾ ಮಾಡಿ ಒಗಿತೀನಿ” ರುದ್ರಪ್ಪ ತನ್ನ ವಿಚಾರ ಹೇಳಿದ. ಮಡದಿ ಪಾರವ್ವ ಇದಕ್ಕ ಸಹಮತವಿರಬಹುದೆಂಬ ‘ಕಬೂಲಿ’ ತೆಗೆದುಕೊಂಡಂತೆ ಖಚಿತವಾಗಿ ಹೇಳಿದ. ಆದರೆ ಬಾಬು ಅಣ್ಣ ಬಹಳ ಖಿಂವಟ ಮನುಷ್ಯ! ಆತ ತಪಶೀಲುವಾರು ಹೋಗುವವನೇ!

“ಮತ್ತ ಪಾರವ್ವ ನೀ ಯಾನಂತಿ? ಬಿಡಿಸಿ ಹೇಳವಲ್ಲಿ ಅಲ್ಲ?” ಬಾಬು ಅಣ್ಣ ಅಂದ.

“ಐತೆರಲ್ಯಾ! ಇಬ್ರು–ಕಾರಬಾರಿ ಮತ್ತ ನಾನು ವಿಚಾರ ಮಾಡೀನ ಈ ಠರಾವಿಗಿ ಬಂದೇವು” ಎಂದು ತನ್ನ ಕಾರಬಾರ್ಯಾನ ನುಡಿಗೆ ಒಪ್ಪಿಗೆಯ ಮುದ್ರೆ ಒತ್ತಿದಳು. ಬಾಬು ಅಣ್ಣ ಮತ್ತು ಸದುಕಾಕಾ ಪರಸ್ಪರ ತುಸು ಹೊತ್ತು ಆಚೆ ಹೋಗಿ ಮಾತಾಡಿಕೊಂಡು ಬಂದರು. ಬಳಿಕ ಸದುಕಾಕಾ ಅಂದರು.

“ಹನ್ನೆರಡ ಎಕರೆದಾಗ ಆರ ಪಾಲ, ಒಂದು ಹೆಣ್ಮಗಳಿಗಿ, ಒಂದು ಅವ್ವ ಅಪ್ಪಗ, ಉಳಿದದ್ದು ನಾಕ ಪಾಲ.. ಹಿರೇರ ಏನು ಇಟಗೋತೇರಿ?” ಮಕ್ಕಳತ್ತ ನೋಟ ಬೀರಿ. “ನೀವ ಯಾವ ಯಾವ ಸೀಮೀದು ಅಂತ ವಿಚಾರ ಮಾಡಿರಬೇಕಲ್ಲ? ಬಂಗಾರ ಬೆಳ್ಳಿ ಅದು ಇದು ಆಮ್ಯಾಲ ನೋಡೋಣು...” ಪಾಲು ಮಾಡುವ ವಿವರಗಳನ್ನು ಬಿಚ್ಚಿಟ್ಟರು.

ಮಹಾದೇವ ಮತ್ತು ಉಳಿದವರು ಪರಸ್ಪರ ಒಮ್ಮೆ ಮುಖ ನೋಡಿದರು. ತಮ್ಮ ತಂದೆ ತಾಯಂದಿರು ಇದ್ಯಾಕ ಹೀಗೆ ಒಮ್ಮೆಲೆ ಹಂಚುವ ತೀರ್ಮಾನಕ್ಕೆ ಬಂದಿದ್ದಾರೆ ಎನ್ನುವುದು ಅವರಿಗೆ ಒಗಟಾಗಿತ್ತು. ಹಾಗೆಯೇ ಪಾಲು ಮಾಡಲೇಬೇಕೆಂದು ಹೊರಟಾಗ ತಮ್ಮಗಳ ಪಾಲಿನ ಜಮೀನು ಸಿಕ್ಕ ಬಳಿಕ ಏನೆಲ್ಲ ಮಾಡಬಹುದಾದ ಸಾಧ್ಯತೆಗಳ ಕನಸುಗಳನ್ನೂ ಹೆಣೆಯುತ್ತಿದ್ದರು. “ಸಣ್ಣವ ಮೊದಲು ಏನು ತಗೋತಾನ ತಗೊಳ್ಳಲಿ. ಆಮ್ಯಾಲ ನಾವು ತಗೊತೀವಿ” ಎಂದ ಮಹಾದೇವ. ಆದರೆ ಇದಕ್ಕೆ ಸಹದೇವ ಮತ್ತು ಸಂಜೀವರ ತಕರಾರಿರಬಹುದು. ಅವರು ಪರಸ್ಪರ ಮುಖ ನೋಡಿದರು. “ನನಗ ಹೊಳಿಕಡಿ ಜಮೀನ ಇರಲಿ” ಸಹದೇವ ಅಂದ ಮತ್ತು ಸಂಜೀವನತ್ತ ‘ನೀ ಕೇಳ’ ಅನ್ನೊಹಾಂಗ ದೃಷ್ಟಿಬೀರಿದ. “ನನಗ ಬಾವಿ ಇರೋದು ಕೊಡ್ರಿ...” ಸಂಜೀವನೂ ತನ್ನ ಆಸೆಯ ಅರುಹಿದ.

ಸದುಕಾಕಾ “ರಾಜೀವ ನೀ ಸಣ್ಣಾಂವ, ಯಾಕ ಸುಮ್ಮನ ಕುಂತಿ” ಎಂದು ಕೆದಕಿದರು. ರಾಜೀವನು ಲೆಕ್ಕ ಹಾಕಿಯೇ ಇದ್ದಂಗಿತ್ತು. “ಮಹಾದೇವ ಅಣ್ಣ ಹೇಳ್ಯಾರಲ, ಫೈಲೆ ಸಣ್ಣಾಂವ ಕೇಳಲಿ ಅಂತ. ಅದಕ ಕೇಳತೀನಿ. ನನಗ ಈಚಿಕಡೀದು ಅಣ್ಣ ಕೇಳ್ಯಾನ, ಹೊಳಿ ಆ ದಂಡೇದು ನನಗ ಇರಲಿ...” ಅಂದ. ಮಹಾದೇವ ಏನೋ ಚಿಂತಿಸಿ “ಊರಾಗ ಹೊಲಮನಿ ಮಾಡೋ ಸಂಜೀವಗ ಹೆಚ್ಚಿಗಿ ಕೊಡ್ರಿ. ಅಂವಗ ನೌಕರೀನೋ, ಉದ್ಯೋಗಾನೋ!”

ಬಾಬುಅಣ್ಣ ಅಂದರು, “ಇದಕ್ಕ ಎಲ್ಲರ ಸಮ್ಮತಿ ಅದನ... ನಿಮ್ಮ ಅಣ್ಣತಂದಿರದು”. ಉಳಿದವರು ತಲೆಯಾಡಿಸಿ ಸಹಮತನೀಡಿದರು. ಆದರ ರಾಜೀವ ತಕರಾರು ಎತ್ತಿದ. “ಪಾಲಾಗೋದ ಆದರ ಸಮಾ ಆಗಲಿ” ಅಂದ.

ಮಹಾದೇವ ಅವನಿಗೆ ತಿಳಿ ಹೇಳಿದಂತೆ “ಅಲಪಾ ಅಂವಾ ಸಾಲಿ ಕಲಿತಿಲ್ಲ. ನಿನಗ ನೌಕರಿ ಐತಿ. ಒಂದೆಕೆರೆ ಹೆಚ್ಚಿಗಿರಲಿ ಬಿಡು. ಸುಳ್ಳ ಹಿರೇರ ಮುಂದ ತಕರಾರ ಬ್ಯಾಡ” ಅಂದಾಗ, ಮಧ್ಯೆ ಬಾಯಿಹಾಕಿದ ಸದುಕಾಕಾ “ಅಂವಗ ಮುಕ್ತವಾಗಿ ಮಾತಾಡಲಿಕ್ಕೆ ಬಿಡ್ರಿ. ಮನಸಿನ್ಯಾಗ ಸುಳ್ಳ ಕೀಸರುಬ್ಯಾಡ, ನೀ ಮಾತಾಡು ರಾಜೀವಾ...” ವಾಜಮಿ ಮಾತನ್ನೇ ಹೇಳಿದರು.

ಉಳಿದವರು ಸುಮ್ಮನಾದರು. ರಾಜೀವ ನಿಧಾನಕ್ಕೆ ಅಂದ. “ಆತು, ಅಣ್ಣ ಹೇಳಿದಂಗ ಸಂಜೀವಣ್ಣಗ ಹೆಚ್ಚ ಕೊಡ್ರಿ, ನಾನೂ ಬ್ಯಾಡನ್ನಲ್ಲ, ಆದರ ನಾನು ಕೇಳಿದ ಹೊಲ ನನಗ ಕೊಡ್ರಿ ಸಾಕ್!” ಚಿಟಿಕಿ ಮುರಿದಂಗ ಅಂದ. ಎಲ್ಲರ ಸಹಮತ ಇದ್ದಂಗಿತ್ತು. ಮಂಗನ ಹುಣ್ಣಿನ ಕತೆಯಾಗಬಾರದೆಂದು ಬಯಸಿದಂತೆ ಇತ್ತು. ಆದರೆ ದೇವಕಿಯನ್ನು ಯಾರೂ ಏನನ್ನೂ ಕೇಳತಿಲ್ಲವಲ್ಲ ಅಂತ ಆಕೆ ಒಂದಿಷ್ಟು ದುಸುಮುಸುಗುಡುತಿದ್ದಳು. ಕಡೆಗೂ ಅತ್ತ ಬಾಬುಅಣ್ಣಾರ ಗಮನಹೋಯಿತು. “ಕಸದಾಗ ಕರಾ ಮರೆತರು ಅಂದಂಗ, ದೇವಕಿಗಿ ಯಾರೂ ಯಾನು ಮಾತಾಡಿಸತಾನ ಇಲ್ಲಲ್ಲ” ಎಂದು ತಮಾಷೆಯಾಗಿ ಮಾತು ಉರುಳಿಸಿದರು.

“ನಾನೂ ಆವಾಗಿಂದ ನೋಡಾಕತ್ಯಾನ, ಒಮ್ಮಿ ಇವರದೆಲ್ಲ ಮುಗೀಲಿ ಅಂತ ಸುಮ್ಮಕಿದ್ನಿ. ನನಗ ಸಾಲಿ ಭಾಳ ಕಲಿಯೋದಿತ್ತು, ಆದರ ಆಗಲಿಲ್ಲ. ಅಪ್ಪನ ದುಡಿಮ್ಯಾಗ ಸಾಧ್ಯ ಇರಲಿಲ್ಲ. ಇವರೆಲ್ಲ ಕಲಿತು ಪಾರಾದರು. ನೀವ್ ಹಿರೇರು ಅದೀರಿ ಛಲೋನ ನೋಡರ್ರಿ” ಅಂದಳು.

ಸದುಕಾಕಾ “ನಿಂದ ಪಾಲ್ ಇದ್ದ ಐತಿ” ಎಂದು ದೇವಕಿಗೆ ಹೇಳಿ, ರುದ್ರಪ್ಪನ ಕಡೆ ಹೊರಳಿದರು. ಆದರ ಚರ್ಚೆ ಮತ್ತ ಕಾಗದದೊಳಗಿರಲಿ ಅಂತ, ತುಸು ತಡೆದು “ಯಾನಂತಿ ರುದ್ರಪ್ಪ? ನೀವ ಯಾನ ಇಟಕೋತೀರಿ’ ಕೇಳಿದರು. ರುದ್ರಪ್ಪ ಪಾರವ್ವಳ ಮುಖ ನೋಡಿದ. “ನಮಗ್ಯಾನೂ ಬ್ಯಾಡ. ಎಲ್ಲ ಅವರಿಗೇನ ಹಂಚಿರಿ. ನಮಗ ಸಮಾಧಾನ ಐತಿ. ಬಂಗಾರ ಮಗಳಿಗಿರಲಿ...” ಎಲ್ಲರಿಗೂ ಅಚ್ಚರಿ ಮೂಡುವಂತೆ ಅಂದರು. ಅವರಿಬ್ಬರಲ್ಲಿ ಒಂದು ಬಗೆಯ ನಿರ್ಭಾವುಕತೆಯಿತ್ತು.

“ಅಲ್ಲ, ನಾಳಿ ಪಾಲಾ ಯಾವ ಸೂಳೆಮಗ ಮಾಡಿದ ಅಂತ ಜನ ಬೈಯಬಾರದು. ಹುಚ್ಚರಂಗ ಮಾತಾಡಬ್ಯಾಡ” ಬಾಬು ಅಣ್ಣ ಅಂದರು. ಆದರೆ ರುದ್ರಪ್ಪ, “ನಮಗ ತಗೊಂಡ ಯಾನ್ ಮಾಡೋದು. ಮುದುಕ–ಮುದುಕಿಗಿ ಯಾಡ್ ರೊಟ್ಟಿ ಹಾಕಿದರ ಸಾಕ್. ಹೆಚ್ಚಿನ ಅಪೇಕ್ಷೆ ಇಲ್ಲ. ಮಗಳ ಮದ್ವಿ ಅಷ್ಟ ಎಲ್ಲಾರು ಕೂಡಿ ಮಾಡಿದರ ಆತು. ಇನ್ನ್ಯಾನ!”

ಕೊನೆಗೂ ಪಾಲು ಮಾಡಿಕೊಡುವ ಪ್ರಸಂಗಕ್ಕೆ ಕೊನೆಯಮೊಳೆ ಹೊಡೆಯಲಾಯಿತು. ಬಹುಚರ್ಚೆಗಳ ಬಳಿಕ ‘ಮಹಾದೇವ ರಾಜೀವ ಪಾರವ್ವನನ್ನೂ ಮತ್ತು ಸಹದೇವ ಸಂಜೀವ ರುದ್ರಪ್ಪನನ್ನೂ ಹಯಾತಿರುವ ತನಕ ಚಂದಾಗಿ ನೋಡಿಕೊಳ್ಳಬೇಕು’ ಎಂದು ಪಂಚರಿಬ್ಬರು ನಿರ್ಣಯ ನೀಡಿ ಹೋದರು. ಹಾಗೆ ಕಾಗದದಲ್ಲಿ ಬರೆಯಿಸಿದರು.

***

ಪಾರವ್ವ ಆಗಾಗ ಪಶ್ಚಾತ್ತಾಪದಿಂದ ವಟಗುಡುತ್ತಿರುತ್ತಾಳೆ. ‘ಕಾರಬಾರಿ ಮತ್ತು ತಾನು ಭಾವುಕತನಕ್ಕ ಬಿದ್ದ ತಪ್ಪು ನಿರ್ಧಾರ ತೆಗೆದುಕೊಂಡೆವು ಎಂಬುದು. ಇಂದಿನ ತನ್ನ ಸ್ಥಿತಿಗೆ ಕಾರಣವು ಸಹ ಅದೇ ಆಗಿದೆ. ನಾವೂ ಒಂದೀಟು ಜಮೀನು ಇಟಕೊಂಡಿದ್ದರ, ಸೊಸೆಯಂದಿರು ಈ ಕಾಲು ಮುರಿದಾಕಿ ಅತ್ತೀನ ಛಲೋ ನೋಡಿಕೊಳ್ಳತಿದ್ದರೇನೊ’. ನೋಡಿಕೊಳ್ಳುವುದಕ್ಕೆ ಆಸ್ತಿಯೇ ಇರಬೇಕೆಂಬ ಒಂದು ಟ್ಯಾಬು ಸೃಷ್ಟಿಯಾಗಿರುವುದು ಈ ಕಾಲದ ದುರಂತವೇ ಸರಿ! ಮಹಾದೇವ ಪಾರವ್ವಳಿಗೆ ನಿತ್ಯ ಹೇಳುತಿರುತ್ತಾನೆ – ಅದು ಸಂಪೂರ್ಣ ಸತ್ಯವಲ್ಲಂತ. ಒಬ್ಬ ಮನುಷ್ಯನನ್ನ ಮನುಷ್ಯ ಪ್ರೀತಿಯಿಂದ ನೋಡಲು ಸಾಧ್ಯ ಹೊರತು ಹಣ, ಆಸ್ತಿಯಿಂದಲ್ಲ. ಆದರೆ ಲೋಕರೂಢಿಯಂತೆ ಮಾತನಾಡುವಾಗ ನಿಮಗೆ ಉತ್ತರಗಳು ಅರಿವಿದ್ದು ಮೌನವಾಗುತ್ತವೆ. ಮಹಾದೇವ ಅನೇಕ ಸಾರೆ ತನ್ನ ಮಡದಿ, ಮಕ್ಕಳು, ಬಳಗದವರು, ಬಂಧುಗಳ ಹೆಂಡತಿಯರಿಗೆ ಹೇಳಿದ್ದಿದೆ. ಒಬ್ಬ ವ್ಯಕ್ತಿ ಹತ್ತು ಹನ್ನೆರಡು ವರ್ಷ ಒಂದೇ ಕೋಣೆಯಲ್ಲಿ ವಾಸವಾಗಿ ಮಾನಸಿಕ ಸ್ಥಿತಿಯನ್ನು ಉತ್ತಮವಾಗಿಟ್ಟುಕೊಳ್ಳುವುದೆಂದರೆ ಹುಡುಗಾಟಿಕೆಯ ಮಾತಲ್ಲ. ನಾವ್ಯಾರು ಒಂದು ದಿನ ಹಾಗಿರಲು ಸಾಧ್ಯವಿಲ್ಲ. ಆದರೆ ಮಹಾದೇವನ ಯಾವ ಮಾತುಗಳ ಪರಿಣಾಮವು ಯಾರ ಮೇಲೂ ಆದಂತೆ ಇರುವುದಿಲ್ಲ.

ಪಾರವ್ವಳಿಗೆ ಗ್ರಾಮದೈವ ಸಿದರಾಯನ ಮೇಲೆ ಅಪಾರ ಭಕ್ತಿ. ಈ ಕಲಬುರಗಿ ಕಲ್ಯಾಣಸಿದ್ಧ ಊರವರ ಬಾಯಲ್ಲಿ ಸಿದರಾಯನಾಗಿದ್ದಾನೆ. ಶರಣ ಮತ್ತು ಸಿದ್ಧ ಪರಂಪರೆ. ಆದರೆ ನೂರಾರು ವರ್ಷಗಳ ಪರಂಪರೆಯಲ್ಲಿ ನಂಬುಗೆ–ಅಪನಂಬುಗೆ, ಆಚರಣೆ–ಅನಾಚರಣೆಗಳು ಅದೆಷ್ಟು ಅಪಭ್ರಂಶಗೊಂಡಿವೆಯೆಂದರೆ